ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

1) ರಾಜ್ಯದಲ್ಲಿ ಒಟ್ಟು 753 ಸರ್ಕಾರಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳು ಇವೆ. ಇವುಗಳಲ್ಲಿ—

| | |
|---|---|
| 1) ಪ್ರಿಮೆಟ್ರಿಕ್ ವಿದ್ಯಾರ್ಥಿನಿಲಯಗಳು | 655 |
| 2) ಕಾಲೇಜು ವಿದ್ಯಾರ್ಥಿನಿಲಯಗಳು | 98 |
| ಒಟ್ಟು : | 753 |

2) ಇವುಗಳಲ್ಲಿ 330 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡವನ್ನು ಹೊಂದಿರುತ್ತವೆ. ಉಳಿದ 423 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ವಿವರಗಳು ಈ ಕೆಳಗಿನಂತಿದೆ.

| | ಸ್ವಂತ ಕಟ್ಟಡ | ಬಾಡಿಗೆ ಕಟ್ಟಡ |
|---|---|---|
| 1) ಪ್ರಿಮೆಟ್ರಿಕ್ ವಿದ್ಯಾರ್ಥಿನಿಲಯಗಳು | 310 | 345 |
| 2) ಕಾಲೇಜು ವಿದ್ಯಾರ್ಥಿನಿಲಯಗಳು | 20 | 78 |
| ಒಟ್ಟು : | 330 | 423 |

3) ರೂ. 35.00 ಲಕ್ಷ.

4) ಹೌದು.

5) ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಆಯವ್ಯಯದಲ್ಲಿ 235.50 ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ಈಗಾಗಲೇ 100 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣವು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ಪ್ರಸಕ್ತ ಸಾಲಿನಲ್ಲಿ 61 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾರ್ಯಕ್ರಮವಿದೆ.

ವಿಷಯ :– ಅಂಗವಿಕಲರಿಗೆ ದ್ವಿಚಕ್ರ ಮತ್ತು ತ್ರಿಚಕ್ರಗಳ ಸೌಲಭ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 806 (1168)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು ?

ಆ) ಅವುಗಳ ಪೈಕಿ ಎಷ್ಟು ಜನರಿಗೆ ದ್ವಿಚಕ್ರ ವಾಹನ, ತ್ರಿಚಕ್ರ ವಾಹನಗಳನ್ನು ನೀಡಲಾಗಿದೆ; ಹಾಗೂ ಎಷ್ಟು ಜನರಿಗೆ ಅವುಗಳನ್ನು ನೀಡಿರುವುದಿಲ್ಲ.

ಇ) ಅವುಗಳಲ್ಲಿ ಇಂಧನ ಚಾಲಿತ ವಾಹನಗಳ ಹಾಗೂ ಸ್ವಯಂ ಚಾಲಿತ ವಾಹನಗಳ ಸಂಖ್ಯೆ ಎಷ್ಟು?

ಈ) ಉಳಿದವರಿಗೆ ಈ ಸವಲತ್ತನ್ನು ಯಾವಾಗ ಒದಗಿಸಲಾಗುವುದು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು) :–

ಅ) ಅಂಗವಿಕಲರ ಯಾವುದೇ ಸಮೀಕ್ಷೆ ಆಗಿಲ್ಲದಿರುವುದರಿಂದ ರಾಜ್ಯದಲ್ಲಿ ಅಂಗವಿಕಲರ ಸಂಖ್ಯೆ ಎಷ್ಟು ಎಂಬುದು ಲಭ್ಯವಿರುವುದಿಲ್ಲ.

ಆ) 692 ಫಲಾನುಭವಿಗಳಿಗೆ ತ್ರಿಚಕ್ರ ವಾಹನಗಳನ್ನು ಮಂಜೂರು ಮಾಡಲಾಗಿದೆ. ಹಾಗೂ ಸುಮಾರು 1000 ಅರ್ಜಿಗಳು ಮಂಜೂರಾತಿಗಾಗಿ ಪರಿಶೀಲನೆಯಲ್ಲಿವೆ.

ಇ) 460 ಯಂತ್ರ ಚಾಲಿತ ತ್ರಿಚಕ್ರ ವಾಹನಗಳು ಮತ್ತು 232 ಕೈ ಚಾಲಿತ ತ್ರಿಚಕ್ರ ವಾಹನಗಳು.

ಈ) ಆದಷ್ಟು ಬೇಗನೆ ಈ ಸವಲತ್ತುಗಳನ್ನು ಉಳಿದವರಿಗೆ ಒದಗಿಸುವ ಕ್ರಮ ತೆಗೆದುಕೊಳ್ಳಲಾಗುವುದು.